# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.10/2019**

**ದೋ.ಸಾ. : 60 ಫ್ರಾ.ಸಾ. : 43**

| | | |
|---|---|---|
| ಸಾಕ್ಷಿಯ ಹೆಸರು | : | ದಯಾನಂದ ನಾಯ್ಕ |
| ತಂದೆಯ ಹೆಸರು | : | ಮಹಾಬಲೇಶ್ವರ ನಾಯ್ಕ |
| ವಯಸ್ಸು | : | 60 ವರ್ಷ |
| ಕೆಲಸ | : | ನಿವೃತ್ತ ಕಸ್ಟಮ್ ಅಧಿಕಾರಿ |
| ವಾಸ | : | ಕಾರವಾರ |

**ದಿನಾಂಕಃ 30-10-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ:-**

1. ನಾನು ಸಪ್ಟೆಂಬರ್ 2018 ರಿಂದ 2022 ರವರೆಗೆ ಕಾರವಾರದ ಕಸ್ಟಮ್ಸ್ ಇಲಾಖೆಯಲ್ಲಿ ಸುಪರಿಡೆಂಟ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕಃ14.12.2018 ರಂದು ಕಾರವಾರದ ಪೊಲೀಸರು ನಮ್ಮ ಕಛೇರಿಗೆ ಕೋರಿಕೆ ಪತ್ರ ಬರೆದಿದ್ದು, ಅದರಲ್ಲಿ ಮೃತ ಪ್ರೇಮಕುಮಾರನು ಅಂಬೆಡ್ಕರ್ ಸೇನೆ ಅಥವಾ Poiner Shipping Company ಯ ವತಿಯಿಂದ ಕಾರವಾರ ಶಿಪ್ಪಿಂಗ್ ಕಂಪನಿ ಹಾಗೂ ಅದರ ಮಾಲೀಕನಾದ ರಿಜ್ವಾನ್ ಇವರ ವಿರುದ್ಧ ಕಳೆದ ಮೂರು ವರ್ಷಗಳಲ್ಲಿ ಯಾವುದಾದರೂ ದೂರು ದಾಖಲಾಗಿದ್ದರೆ ಅದರ ಮಾಹಿತಿ ಹಾಗೂ ಎಮ್ ಎಮ್ ಸಿ ಎಲ್ ಕಂಪನಿಯವರು ಪೈಪ್ ಅಳವಡಿಸುವ ಸಂಬಂಧ ಕಸ್ಟಮ್ ಜಮೀನಿನಲ್ಲಿ ಮಣ್ಣು ತೆಗೆಯುತ್ತಿರುವ ಬಗ್ಗೆ ಪ್ರೇಮ್ ಕುಮಾರನು ಅಂಬೆಡ್ಕರ್ ಸೇನೆ ವತಿಯಿಂದ ಏನಾದರೂ ದೂರು ಸಲ್ಲಿಸಿದರೆ ಅದರ ಮಾಹಿತಿ ನೀಡುವಂತೆ ಕೋರಿಕೊಂಡಿರುತ್ತಾರೆ.

3. ಪೊಲೀಸರ ಕೋರಿಕೆ ಪತ್ರದ ಮೇರೆಗೆ ನಾನು ದಾಖಲೆಗಳನ್ನು ಪರಿಶೀಲಿಸಿದಾಗ ಪ್ರೇಮ್ ಕುಮಾರನು 1 ನೇ ಆರೋಪಿತನ ವಿರುದ್ಧ ಯಾವುದೇ ದೂರು ದಾಖಲಿಸಿರುವುದು ಕಂಡು ಬಂದಿರುವುದಿಲ್ಲ ಹಾಗೂ ಈ ಬಗ್ಗೆ ನನ್ನ ಹಿಂದಿನ ಅಧಿಕಾರಿಯವರ ಬಳಿ ವಿಚಾರಿಸಲಾಗಿ, ಸದರಿಯವರು ಮಾಹಿತಿ ನೀಡಿದಂತೆ, ಪ್ರೇಮ್‌ಕುಮಾರ ಇತನು ಎಮ್ ಎಮ್ ಸಿ ಎಲ್ ಕಂಪನಿಯವರು ಮಣ್ಣು ತೆಗೆಯುತ್ತಿರುವ ಬಗ್ಗೆ ದೂರನ್ನು ನೀಡಿರುತ್ತಾನೆ ಎಂದು ತಿಳಿಸಿದ್ದು,

ಸದರಿ ಮಾಹಿತಿಯನ್ನು ನಾನು ನಮ್ಮ ಕಛೇರಿಯ ಪತ್ರ ದಿನಾಂಕಃ 02.01.2019 ರಂದು ಕಾರವಾರ ಪೊಲೀಸರಿಗೆ ತಿಳಿಸಿರುತ್ತೇನೆ. ಪೊಲೀಸರಿಂದ ನಮ್ಮ ಕಛೇರಿಗೆ ಬಂದ ಕೋರಿಕೆ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ–114 ಎಂದು ಗುರುತಿಸಲಾಯಿತು. ಸಾಕ್ಷಿಯು ತಾನು ನೀಡಿದ ಮಾಹಿತಿ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–115 ಎಂದು, ಸಾಕ್ಷಿಯ ಸಹಿಯನ್ನು ನಿಪಿ–115(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದಃ–**

4. ಎಮ್ ಎಮ್ ಸಿ ಎಲ್ ಕಂಪನಿಯ ಮಾಲೀಕರ ಹೆಸರು ನನಗೆ ಗೊತ್ತಿಲ್ಲ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದಃ–**

5. ನಿಪಿ–115 ರಲ್ಲಿ ನನ್ನ ಹಿಂದಿನ ಅಧಿಕಾರಿಯ ಹೆಸರನ್ನು ನಮೂದಿಸಿಲ್ಲ ಎಂದರೆ ಸರಿ. ನಿಪಿ–115 ರಲ್ಲಿ ದಿನಾಂಕಃ 02.01.2018 ಎಂದು ನಮೂದಿಸಲಾಗಿದೆ ಎಂದರೆ ಸಾಕ್ಷಿಯು ಮೊದಲಿಗೆ ದಿಃ 02.01.2018 ಎಂದು ಟೈಪ್ ಮಾಡಿ, ನಂತರ ಅದನ್ನು 02.01.2019 ಎಂದು ಸರಿಪಡಿಸಿರುತ್ತೇನೆ ಹಾಗೂ ಸಹಿ ಮಾಡುವ ಜಾಗದಲ್ಲಿಯೂ ಸಹಾ ದಿಃ 02.01.2019 ಎಂದು ನಮೂದಿಸಿರುತ್ತೇನೆ ಎಂದು ನುಡಿಯುತ್ತಾರೆ. ದಿನಾಂಕವನ್ನು ಸರಿಪಡಿಸಿದ ಬಗ್ಗೆ ನನ್ನ ರುಜು ಮಾಡಿಲ್ಲ ಎಂದರೆ ಸರಿ. ಪೊಲೀಸರು ತಯಾರಿಸಿ ನೀಡಿದ್ದಂತಹ ಪತ್ರಕ್ಕೆ ನಾನು ಸೀಲ್ ಹಾಕಿ, ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ಎಸ್.ವಿ.ಎಸ್. ವಕೀಲರಿಂದಃ–**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 5 ನೇ ಆರೋಪಿ ಶ್ರೀ ಹೆಚ್ ಎಸ್ ಎಸ್ ವಕೀಲರಿಂದಃ–**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ